

## ಸೋಹಾ ಪಶ್ಚಾತ್ತಾಪ

ಸುಮಾರು 10 ವರ್ಷವೇ ಕಳೆಯಿತು ನಟಿ ಸೋಹಾ ಅಲಿಖಾನ್ ಚಿತ್ರರಂಗಕ್ಕೆ ಕಾಲಿಟ್ಟು. ಬಣ್ಣದ ಬದುಕಿನ ಹಿನ್ನೆಲೆಯಲ್ಲಿ ಹುಟ್ಟಿದ್ದರೂ ಸೋಹಾ ಚಿತ್ರರಂಗ ಪ್ರವೇಶಿಸಿದ್ದು ತಡವಾಗಿ. ಅದೂ ಮೂವರು ನಾಯಕಿಯರು ತಾರಾಗಣದಲ್ಲಿರುವ 'ದಿಲ್ ಮಾಂಗೆ ಮೋರ್' ಚಿತ್ರದ ಮೂಲಕ. ಶಾಹಿದ್ ಕಪೂರ್ ನಾಯಕರಾಗಿದ್ದ ಈ ಚಿತ್ರದಲ್ಲಿ ಟುಲಿಪ್ ಜೋಶಿ ಮತ್ತು ಆಯೆಷಾ ಟಾಕಿಯಾ ಜೊತೆ ತೆರೆ ಹಂಚಿಕೊಂಡಿದ್ದರು ಸೋಹಾ.

ಹೀಗೆ ದಶಕದ ಸಿನಿ ಪಯಣ ಸವೆಸಿದ ಬಳಿಕ ಕರೀನಾರ ಈ ನಾದಿನಿಗೆ ತನ್ನ ಸಿನಿಮಾ ಆಯ್ಕೆಯ ಬಗ್ಗೆ ಪಶ್ಚಾತ್ತಾಪ ಆಗುತ್ತಿದೆಯಂತೆ. ಈ ಸಿನಿಮಾ ಒಪ್ಪಿಕೊಳ್ಳುವ ಮುಂಚೆ ಸೋಹಾ ಇದ್ದದ್ದು ಇಂಗ್ಲೆಂಡ್‌ನಲ್ಲಿ. 'ಮೂವರು ನಾಯಕಿಯರಿರುವ ಚಿತ್ರವನ್ನು ನನ್ನ ಪದಾರ್ಪಣೆಯ ಚಿತ್ರಕ್ಕಾಗಿ ಏಕೆ ಆಯ್ಕೆ ಮಾಡಿಕೊಂಡೆನೋ ಇಂದಿಗೂ ತಿಳಿಯುತ್ತಿಲ್ಲ' ಎಂದು ಬೇಸರ ಪಟ್ಟಿದ್ದಾರೆ ಸೋಹಾ. ಇಂಗ್ಲೆಂಡಿನಲ್ಲಿದ್ದ ಅವರಿಗೆ ಬಾಲಿವುಡ್‌ನಲ್ಲಿನ ನಾಯಕ– ನಾಯಕಿ ಚಿತ್ರಣಗಳ ಅರಿವೇ ಇರಲಿಲ್ಲವಂತೆ. ಅವರಿಗೆ ಮೂರು ಪಾತ್ರಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವಿತ್ತು. ಅದರಲ್ಲಿ ಅವರು ಆಯ್ದುಕೊಂಡದ್ದು ತನ್ನ ವೃತ್ತಿ ಬದುಕಿಗಾಗಿ ಗೆಳೆಯನನ್ನು ದೂರ ಮಾಡಿಕೊಳ್ಳಲು ಮುಂದಾಗುವ ಮಹತ್ವಾಕಾಂಕ್ಷಿ ಯುವತಿಯ ಪಾತ್ರವನ್ನು.

ಬಾಲಿವುಡ್ ಚಿತ್ರಗಳಲ್ಲಿ ನಾಯಕಿ ತನ್ನ ಸಂಗಾತಿಯನ್ನು ಬಿಟ್ಟು ಹೋಗುವುದನ್ನು ಪ್ರೇಕ್ಷಕರು ಒಪ್ಪುವುದಿಲ್ಲ ಎನ್ನುವುದು ಸೋಹಾಗೆ ತಡವಾಗಿ ಅರ್ಥವಾಗಿದೆಯಂತೆ. ಈ 10 ವರ್ಷಗಳಲ್ಲಿ ಸೋಹಾ ನೆನಪಿನಲ್ಲಿ ಉಳಿಯುವಂಥ ಯಾವ ಪಾತ್ರದಲ್ಲಿ ಕಾಣಿಸಿಕೊಂಡಿಲ್ಲ. 'ರಂಗ್ ದೇ ಬಸಂತಿ'ಯಂಥ ಚಿತ್ರದಲ್ಲಿ ಮಾತ್ರ ಸೋಹಾ ಮೆಚ್ಚುಗೆ ಗಳಿಸಿದ್ದರು. ಆದರೆ ಇಷ್ಟು ವರ್ಷದ ಬಳಿಕ ಸೋಹಾಗೆ ಜ್ಞಾನೋದಯ ಆಗಿದ್ದು ಹೇಗೆ ಎನ್ನುವುದು ಗೊತ್ತಾಗುತ್ತಿಲ್ಲ. ಅಪ್ಪ–ಅಮ್ಮ, ಅಣ್ಣ ಎಲ್ಲರೂ ಸಿನಿಮಾದಲ್ಲಿಯೇ ಮುಳುಗಿದ್ದರೂ ಸೋಹಾಗೆ ಬಾಲಿವುಡ್ ಸಿನಿಮಾಗಳ ಅಂತರಾಳ ತಿಳಿದಿರಲಿಲ್ಲ ಎನ್ನುವುದು ಅಚ್ಚರಿಯೇ ಸರಿ.

■ ಅಮಿ

